ಇ) ಸ್ವಯಂ ನಿವೃತ್ತಿ ಬಯಸಿ ಅರ್ಜಿ ಸಲ್ಲಿಸಿದ ಎಲ್ಲಾ ಅರ್ಹರಿಗೂ ಯೋಜನೆಯ ಸೌಲಭ್ಯವನ್ನು ವಿಸ್ತರಿಸಲು ಸರಕಾರ ಬಯಸಿದೆಯೇ; ಹಾಗಿದ್ದಲ್ಲಿ, ಆ ಕುರಿತಾದ ವಿವರಗಳೇನು ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ರಾಜ್ಯ ಸರ್ಕಾರದ ಹೆಚ್ಚುವರಿ ನೌಕರರಿಗೆ ವಿಶೇಷ ಸ್ವಇಚ್ಛಾ ನಿವೃತ್ತಿ ಯೋಜನೆಯನ್ನು ದಿನಾಂಕ;1.9.2003 ರಿಂದ ಜಾರಿಗೆ ತರಲಾಯಿತು. ಲಭ್ಯವಿರುವ ಮಾಹಿತಿಯ ಪ್ರಕಾರ 375 ನೌಕರರಿಗೆ ಸ್ವಯಂ ನಿವೃತ್ತಿಯ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ.

ಆ) ಸ್ವಯಂ ನಿವೃತ್ತಿ ಯೋಜನೆ ಘೋಷಣೆಯಾದ ನಂತರ ಸದರಿ ಯೋಜನೆಯಡಿ ನಿವೃತ್ತಿ ಬಯಸಿ ಅರ್ಜಿ ಸಲ್ಲಿಸಿದ ನೌಕರರ ಸಂಖ್ಯೆ 570 ಅವುಗಳಲ್ಲಿ ತಿರಸ್ಕೃತ ಅರ್ಜಿಗಳ ಸಂಖ್ಯೆ ಸುಮಾರು 140. ಪುರಸ್ಕೃತ ಅರ್ಜಿಗಳ ಸಂಖ್ಯೆ 375 ಆಗಿರುತ್ತದೆ.

ಇ) ಅರ್ಜಿ ಸಲ್ಲಿಸಿದ ನೌಕರರು ವಿಶೇಷ ಸ್ವಯಂ ನಿವೃತ್ತಿ ಯೋಜನೆಯ ಷರತ್ತುಗಳನ್ನು ಪೂರೈಸಿದಲ್ಲಿ ಅಂತಹ ಎಲ್ಲಾ ನೌಕರರಿಗೂ ಈ ಯೋಜನೆಯನ್ನು ದಿನಾಂಕ: 30.11.2005ರ ತನಕ ವಿಸ್ತರಿಸಲಾಗಿದೆ.

3591 (3824) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರ ಮೇಲೆ ದಾಖಲಾದಸುಳ್ಳು ಮೊಕದ್ದಮೆಯ ಪ್ರಕರಣಗಳನ್ನು ವಾಪಸ್ಸು ಪಡಿಯುವ ಉದ್ದೇಶ ಸರ್ಕಾರಕ್ಕಿದೆಯೇ ;

ಆ) ಹಿರೇಕೆರೂರು ತಾಲ್ಲೂಕಿನ 219 ಜನ ರೈತರ ಮೇಲೆ ದಾಖಲಾದ ಸುಳ್ಳು ಮೊಕದ್ದಮೆ ಕೇಸನ್ನು ಹಿಂದಕ್ಕೆ ಪಡೆಯಲು ಕೈಗೊಂಡ ಕ್ರಮವೇನು ;

ಇ) ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ?

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು) –

ಅ) ಸುಳ್ಳು ಮೊಕದ್ದಮೆ ದಾಖಲಾಗಿಲ್ಲದಿರುವುದರಿಂದ ಹಿಂತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಪರಿಶೀಲಿಸಲಾಗುತ್ತಿದೆ.

ಇ) ಪರಿಶೀಲನಾ ಹಂತದಲ್ಲಿದೆ.